ಗಣಕ ಕ್ಷೇತ್ರ

## ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 1157 |
| ಸದಸ್ಯರ ಹೆಸರು | : | ಶ್ರೀ ಎಂ.ಎ.ಗೋಪಾಲಸ್ವಾಮಿ |
| ಉತ್ತರಿಸುವ ಸಚಿವರು | : | ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 17.03.2020 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತೋಟಗಾರಿಕೆ ಇಲಾಖೆಯಡಿ ಸರ್ಕಾರ ಜಾರಿಗೊಳಿಸಿರುವ ಫಲಾನುಭವಿ ಆಧಾರಿತ ಯೋಜನೆಗಳು ಯಾವುವು; ಈ ಯೋಜನೆಗಳ ಮಾನದಂಡಗಳೇನು? (ವಿವರ ನೀಡುವುದು) | ತೋಟಗಾರಿಕೆ ಇಲಾಖೆಯಡಿ ಸರ್ಕಾರ ಜಾರಿಗೊಳಿಸಿರುವ ಫಲಾನುಭವಿ ಆಧಾರಿತ ಯೋಜನೆಗಳು ಹಾಗೂ ಈ ಯೋಜನೆಗಳ ಮಾನದಂಡಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| ಆ) | ಕಳೆದ 3 ವರ್ಷಗಳಲ್ಲಿ ಹಾಸನ ಜಿಲ್ಲೆಗೆ ಈ ಯೋಜನೆಗಳಡಿ ಬಿಡುಗಡೆ ಮಾಡಿದ ಹಾಗೂ ಖರ್ಚಾಗಿರುವ ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ಅಂದರೆ 2016-17 ರಿಂದ 2018-19ರವರೆಗೆ ಹಾಸನ ಜಿಲ್ಲೆಗೆ ಈ ಯೋಜನೆಗಳಡಿ ಬಿಡುಗಡೆ ಮಾಡಿರುವ ಅನುದಾನ ರೂ.162.76ಕೋಟಿ.<br>ಖರ್ಚಾಗಿರುವ ಅನುದಾನ ರೂ.162.61ಕೋಟಿ.<br>ತಾಲೂಕುವಾರು ವಿವರಗಳನ್ನು **ಅನುಬಂಧ-2ರಲ್ಲಿ** ಒದಗಿಸಿದೆ. |
| ಇ) | ಈ ಯೋಜನೆಗಳ ಸದುಪಯೋಗ ಪಡೆದುಕೊಂಡ ಫಲಾನುಭವಿಗಳು ಯಾರು ಯಾರು? (ಹೆಸರು ಮತ್ತು ವಿಳಾಸದೊಂದಿಗೆ ತಾಲ್ಲೂಕುವಾರು ವಿವರ ನೀಡುವುದು) | ಈ ಯೋಜನೆಗಳಡಿ ಸದುಪಯೋಗ ಪಡೆದುಕೊಂಡ ಫಲಾನುಭವಿಗಳ ತಾಲ್ಲೂಕುವಾರು ವಿವರಗಳನ್ನು CD ಮೂಲಕ ಒದಗಿಸಿದೆ. |

HORTI 125 HGM 2020

(ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

LCQ 1157.

# ಅನುಬಂಧ-1

## ತೋಟಗಾರಿಕೆ ಇಲಾಖೆಯಡಿ ಸರ್ಕಾರ ಜಾರಿಗೊಳಿಸಿರುವ ಫಲಾನುಭವಿ ಆಧಾರಿತ ಯೋಜನೆಗಳು ಹಾಗೂ ಯೋಜನೆಗಳ ಮಾನದಂಡಗಳ ವಿವರ

<table>
<tr><th>ಕ್ರ. ಸಂ</th><th>ಫಲಾನುಭವಿ ಆಧಾರಿತ ಯೋಜನೆ</th><th>ಅನುಷ್ಠಾನಗೊಳಿಸಲು ಅನುಸರಿಸುತ್ತಿರುವ ಮಾನದಂಡಗಳು</th></tr>
<tr><td>1</td><td>ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ,</td><td rowspan="10">1. ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಆಯ್ಕೆಗೆ ಪರಿಗಣಿಸಿದ ನಂತರ ದೊಡ್ಡ ರೈತರನ್ನು ಸಹಾಯಧನಕ್ಕಾಗಿ ಪರಿಗಣಿಸುವುದು.<br>2. ಈ ಹಿಂದೆ ಇಲಾಖೆಯಿಂದ ಯಾವುದೇ ಸಹಾಯಧನ ಪಡೆಯದ ಹೊಸ ಫಲಾನುಭವಿಗಳಿಗೆ ಆದ್ಯತೆ ನೀಡಲಾಗುವುದು.<br>3. ಈ ಹಿಂದೆ ಇಲಾಖೆಯಿಂದ ಸಹಾಯಧನ ಪಡೆದ ಫಲಾನುಭವಿಗಳು ಕಾರ್ಯಕ್ರಮದ ಸರ್ಮಪಕ/ಸದ್ಬಳಕೆ ಮಾಡದ್ದಿದ್ದಲ್ಲಿ ಅಂತಹ ಫಲಾನುಭವಿಗಳನ್ನು ಹೊಸ ಘಟಕ/ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಆಯ್ಕೆಗೆ ಪರಿಗಣಿಸಬಾರದು.<br>4. ಯಾವುದೇ ಫಲಾನುಭವಿಯು ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ ಸೌಲಭ್ಯವನ್ನು ಪಡೆದಿದ್ದರೆ ಈ ಸಾಲಿನಲ್ಲಿ ಅಂತಹ ಫಲಾನುಭವಿಯನ್ನು ಪರಿಗಣಿಸಬಾರದು.<br>5. ಪೂರಕ ಘಟಕಗಳು ಒಂದೇ ವರ್ಷದಲ್ಲಿ ಒದಗಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ಘಟಕಗಳನ್ನು ಮುಂದಿನ ವರ್ಷದಲ್ಲಿ ಒದಗಿಸಲು ಪರಿಗಣಿಸಬಹುದು.<br>6. ಯಾವುದೇ ಸೌಲಭ್ಯಕ್ಕೆ ನಿಗಧಿಗಿಂತ ಅಧಿಕ ಅರ್ಜಿಗಳು ಬಂದಲ್ಲಿ ಅರ್ಹ ಇದ್ದ ಅರ್ಜಿಗಳನ್ನು ಮಾತ್ರ ಪರಿಗಣಿಸಿ ಜಿಲ್ಲಾಮಟ್ಟದಲ್ಲಿ ತೋಟಗಾರಿಕೆ ಉಪನಿರ್ದೇಶಕರು ಇವರ ಅಧ್ಯಕ್ಷತೆಯಲ್ಲಿ ಆಯಾ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ಸಹಾಯಕ ತೋಟಗಾರಿಕೆ ನಿರ್ದೇಶಕರುಗಳನ್ನು ಒಳಗೊಂಡಂತೆ ಸಮಿತಿ ರಚಿಸಿ. ವಿವಿಧ ಯೋಜನೆಗಳಡಿ ಅಂತಿಮ ಫಲಾನುಭವಿ ಪಟ್ಟಿಯನ್ನು ತಯಾರಿಸುವುದು.<br>7. ಇಲಾಖಾ ಯೋಜನಾ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಚಾರ ನೀಡಿ ಮೂರು ಹಂತಗಳಲ್ಲಿ ಅರ್ಜಿ ಆಹ್ವಾನಿಸುವುದು (ಜೂನ್-30, ಜುಲೈ-31 ಮತ್ತು ಆಗಸ್ಟ್ -30 ರವರೆಗೆ). ಈ ಪ್ರಕರಣದಲ್ಲಿ ಘಟಕವಾರು ಗುರಿಗಳನ್ನು ಪ್ರಚಾರ ಮಾಡುವುದು.<br>8. ತಾಲ್ಲೂಕು ಮಟ್ಟದಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಮೀಸಲಾತಿವಾರು ನಿಗಧಿಪಡಿಸಲಾದ ಗುರಿಯನ್ವಯ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ,</td></tr>
<tr><td>2</td><td>ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ</td></tr>
<tr><td>3</td><td>ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ.</td></tr>
<tr><td>4</td><td>ರಾಷ್ಟ್ರೀಯ ತೋಟಗಾರಿಕೆ ಮಿಷನ್</td></tr>
<tr><td>5</td><td>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ</td></tr>
<tr><td>6</td><td>ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ,</td></tr>
<tr><td>7</td><td>ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ,</td></tr>
<tr><td>8</td><td>ಸಾಂಬಾರು ಪಧಾರ್ಥಗಳ ಅಭಿವೃದ್ಧಿ ಮಂಡಳಿ</td></tr>
<tr><td>9</td><td>ಸಮಗ್ರ ತೋಟಗಾರಿಕಾ ಅಭಿವೃದ್ಧಿ</td></tr>
<tr><td>10</td><td>ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ</td></tr>
</table>

<table>
<tr><td>11</td><td>ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ</td><td rowspan="4">ಮಹಿಳೆಯರು, ವಿಕಲಚೇತನರು, ಅಲ್ಪಸಂಖ್ಯಾತರು, ಸಣ್ಣ, ಅತಿ ಸಣ್ಣ ರೈತರು ವರ್ಗವಾರು ವಿಂಗಡಿಸುವುದು.<br>9. ಪ್ರಾಜೆಕ್ಟ್ ಆಧಾರಿತ ಕಾರ್ಯಕ್ರಮಗಳಡಿ ಒಂದು ಆರ್ಥಿಕ ವರ್ಷದಲ್ಲಿ ಒಂದು ಘಟಕಕ್ಕೆ ಮಾತ್ರ ಸಹಾಯಧನ ನೀಡುವುದು.<br>10. ಒಬ್ಬ ಫಲಾನುಭವಿ ಒಂದಕ್ಕಿಂತ ಹೆಚ್ಚು ಸೌಲಭ್ಯಗಳಿಗೆ ಅರ್ಜಿ ಸಲ್ಲಿಸಿದ್ದು, ಅವನು ಸಲ್ಲಿಸಿದ ಸೌಲಭ್ಯಗಳಿಗೆ ಸಾಕಷ್ಟು ಸಂಖ್ಯೆಯ ಇತರೆ ಫಲಾನುಭವಿಗಳು ಸಿಗದೆ ಇದ್ದಲ್ಲಿ ಅಂತಹ ಸಂದರ್ಭದಲ್ಲಿ ಸದರಿ ಫಲಾನುಭವಿಗಳಿಗೆ ಎರಡಕ್ಕಿಂತ ಹೆಚ್ಚಿನ ಕಾರ್ಯಕ್ರಮಗಳಿಗೆ ಸಹಾಯಧನವನ್ನು ನೀಡಬಹುದಾಗಿದೆ.</td></tr>
<tr><td>12</td><td>ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ -II (ಸುಜಲಾ-III) -ಇಏಪಿ</td></tr>
<tr><td>13</td><td>ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ</td></tr>
<tr><td>14</td><td>ಕೃಷಿ ಭಾಗ್ಯ (ತೋಟಗಾರಿಕೆ)</td></tr>
</table>

ನಿರ್ದೇಶಕರು

LCQ -1157

# ಅನುಬಂಧ-2

## ಕಳೆದ 3 ವರ್ಷಗಳಲ್ಲಿ ಅಂದರೆ 2016-17 ರಿಂದ 2018-19 ರವರೆಗೆ ಹಾಸನ ಜಿಲ್ಲೆಗೆ ಬಿಡುಗಡೆ ಮಾಡಿದ ಹಾಗೂ ಖರ್ಚಾದ ಅನುದಾನದ ತಾಲ್ಲೂಕುವಾರು ವಿವರ

(ರೂ.ಕೋಟಿಗಳಲ್ಲಿ)

| ಕ್ರ.ಸಂ | ತಾಲ್ಲೂಕು | 2016-17 | | 2017-18 | | 2018-19 | | ಒಟ್ಟು | |
|---|---|---|---|---|---|---|---|---|---|
| | | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ |
| 1 | ಆಲೂರು | 1.27 | 1.25 | 1.41 | 1.41 | 2.15 | 2.15 | 4.84 | 4.81 |
| 2 | ಅರಕಲಗೂಡು | 2.40 | 2.36 | 2.97 | 2.97 | 3.43 | 3.43 | 8.80 | 8.76 |
| 3 | ಅರಸೀಕೆರೆ | 4.88 | 4.87 | 7.21 | 7.21 | 41.23 | 41.22 | 53.31 | 53.29 |
| 4 | ಬೇಲೂರು | 3.01 | 3.01 | 7.63 | 7.62 | 11.67 | 11.67 | 22.31 | 22.31 |
| 5 | ಚನ್ನರಾಯಪಟ್ಟಣ | 5.80 | 5.80 | 6.56 | 6.56 | 31.96 | 31.96 | 44.32 | 44.31 |
| 6 | ಹಾಸನ | 5.19 | 5.18 | 6.58 | 6.58 | 6.82 | 6.77 | 18.58 | 18.53 |
| 7 | ಹೊಳೆನರಸೀಪುರ | 1.74 | 1.74 | 2.30 | 2.30 | 3.56 | 3.56 | 7.60 | 7.59 |
| 8 | ಸಕಲೇಶಪುರ | 0.93 | 0.93 | 1.27 | 1.27 | 0.80 | 0.80 | 3.01 | 3.01 |
| ಒಟ್ಟು | | **25.21** | **25.14** | **35.93** | **35.93** | **101.62** | **101.56** | **162.76** | **162.61** |

ನಿರ್ದೇಶಕರು